**ಅಸಲು ದಾವ ಸಂಖ್ಯೆ: 292/2022**

**ಡಿ.ಡಬ್ಲೂ -1**

**ದಿಃ 04-12-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಂದುವರೆದ ಪಾಟೀ ಸವಾಲು ವಾದಿಪರ ವಕೀಲರಾದ ಶ್ರೀ YGG ರವರಿಂದಃ-</u>**

1. ದಾವಾ ಸ್ವತ್ತು ನಮ್ಮ ತಂದೆ ಖರೀದಿಸಿದ ಆಸ್ತಿ ಆಗಿರುತ್ತದೆ ಎಂದರೆ ಸರಿ. ಸ್ವತ್ತನ್ನು ಖರೀದಿಸುವ ಸಮಯದಲ್ಲಿ ಅದು ಖಾಲಿ ಜಾಗ ಆಗಿತ್ತು ಎಂದರೆ ಸಾಕ್ಷಿ ಸದರಿ ಸ್ವತ್ತು ಮನೆ ಆಗಿತ್ತು ಎಂದು ನುಡಿಯುತ್ತಾರೆ. ಕಲ್ಲಪ್ಪ ರವರ ಪಾಲಿಗೆ ಹೋದ ಮನೆಯ ಸಂಖ್ಯೆ ಹೇಳಲು ನನಗೆ ಬರುವುದಿಲ್ಲ. ಸದರಿ ಮನೆಯು ಲಕ್ಷ್ಮೀ ಗಲ್ಲಿಯಲ್ಲಿ ಇರುತ್ತದೆ. ಕಲ್ಲಪ್ಪ ರವರು ಮರಣಹೊಂದಿರುತ್ತಾರೆ. ಲಕ್ಷ್ಮೀ ಗಲ್ಲಿಯ ಮನೆಯಲ್ಲಿ ಕಲ್ಲಪ್ಪ ರವರ ವಾರಸುದಾರರು ವಾಸ ಮಾಡುತ್ತಾರೆ ಎಂದರೆ ಸರಿ. ನನ್ನ ತಂದೆಯು ಸ್ವತ್ತುಗಳನ್ನು ವಿಭಾಗ ಮಾಡಿದಾಗ ಲಕ್ಷ್ಮೀ ಗಲ್ಲಿಯ ಮನೆಯನ್ನು ಪೂರ್ಣವಾಗಿ ಕಲ್ಲಪ್ಪ ರವರ ಹಿಸ್ಸೆಗೆ ಹಾಗೂ ಈ ದಾವಾ ಸ್ವತ್ತನ್ನು ನನ್ನ ಹಾಗೂ ವಾದಿಯ ಹಿಸ್ಸೆಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಕಲ್ಲಪ್ಪ ರವರಿಗೂ ಸಹ ಹಿಸ್ಸೆ ಇರುತ್ತದೆ ಎಂದು ನಾನು ಎಲ್ಲಿಯೂ ಸಹ ನನ್ನ ಲಿಖಿತ ಹೇಳಿಕೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸಾಕ್ಷಿ ಅದಕ್ಕೆ ಉತ್ತರಿಸಿರುವುದಿಲ್ಲ. ನಿಡಿ-1 ರ ಗ್ರಾಮ ಪಂಚಾಯತಿ ಉತಾರ ಮಾಡುವ ಸಮಯದಲ್ಲಿ ಪಂಚಾಯತಿಯವರು ವಾದಿಗೆ ನೋಟಿಸ ನೀಡಿದ್ದರಾ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ನಿಡಿ-1 ರ ಉತಾರ ಆಗುವ ಮೊದಲು ಸದರಿ ಸ್ವತ್ತಿನ ಎಂದರೆ ದಾವಾ ಸ್ವತ್ತಿನ ಉತಾರದಲ್ಲಿ ನನ್ನ ಹಾಗೂ ವಾದಿಯ ಹೆಸರು ಜಂಟಿಯಾಗಿ ನಮೂದಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕೇವಲ ತನ್ನ ಹೆಸರು ಮಾತ್ರ ನಮೂದಾಗಿತ್ತು ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಉತಾರದಲ್ಲಿ ಯಾವ ಆಧಾರದ ಮೇಲೆ ನನ್ನ ಹೆಸರನ್ನು ನಮೂದು ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಸುಮಾರು 30 ವರ್ಷಗಳಿಂದ ತಾನೇ ಸದರಿ ಸ್ವತ್ತಿನ ಮೇಲೆ ತೆರಿಗೆ ಪಾವತಿ ಮಾಡುತ್ತಿರುವುದಾಗಿ ಹಾಗೂ ಸದರಿ ಸ್ವತ್ತಿನ ಕಡೆಗೆ ತಾನು ವಾದಿಗೆ ಹಣ

ನೀಡಿರುವುದಾಗಿ ನುಡಿಯುತ್ತಾರೆ. ನಾನು ವಾದಿಗೆ ದಾವಾ ಸ್ವತ್ತಿನ ಕಡೆಗೆ ಹಣ ನೀಡಿರುವ ಬಗ್ಗೆ ದಾಖಲೆ ಇದೆಯೇ ಎಂದರೆ ಸಾಕ್ಷಿ ಅದರ ಕುರಿತು ಒಂದು ಬಾಂಡ್ ಇದ್ದು, ಸದರಿ ಬಾಂಡ್ ಓರ್ವ ಪಂಚಾಯತಿ ಸದಸ್ಯನ ಬಳಿ ಇತ್ತು ಹಾಗೂ ಆ ಸದಸ್ಯ ಮರಣಹೊಂದಿರುವುದಾಗಿ ನುಡಿಯುತ್ತಾರೆ. ಸದರಿ ಬಾಂಡ್ ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇದೆಯಾ ಎಂದರೆ ಸಾಕ್ಷಿ ತನ್ನ ಸದರಿ ಬಾಂಡ್ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಬಾಂಡ್ ಆಗಿರುವ ತಾರೀಕು, ತಿಂಗಳು ಹಾಗೂ ಇಸವಿ ನನಗೆ ನೆನಪು ಇರುವುದಿಲ್ಲ. ಸದರಿ ಬಾಂಡ್‌ನ ಕುರಿತು ನನ್ನ ಲಿಖಿತ ಹೇಳಿಕೆಯಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ.

2. ನನ್ನ ತಂದೆ ಮರಣದ ನಂತರ ದಾವಾ ಸ್ವತ್ತಿನ ಉತಾರ ನನ್ನ ಹೆಸರಿಗೆ ಮಾಡಬೇಕೆಂದು ವಾದಿ ಲಿಖಿತವಾಗಿ ಯಾವುದೇ ಪತ್ರ ನೀಡಿರುವುದಿಲ್ಲ. ಈ ದಿನದವರೆಗೂ ಸಹ ನನ್ನ ಸಹೋದರ ನಾಗೇಶ ಎಂದರೆ ವಾದಿ ಆ ರೀತಿ ಯಾವುದೇ ಲಿಖಿತ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಆದ್ದರಿಂದ ನಾನು ಅದನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಆ ರೀತಿ ಯಾವುದೇ ದಾಖಲೆ ಇಲ್ಲದೇ ಇದ್ದರೂ ಸಹ ನಾನು ಪಂಚಾಯತಿ ಅಧಿಕಾರಿಯೊಂದಿಗೆ ಶಾಮೀಲಾಗಿ ನಿಡಿ-1 ರ ಉತಾರ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಈ ದಿನದವರೆಗೂ ಸಹ ನಾನು ಹಾಗೂ ವಾದಿ ಜಂಟಿಯಾಗಿ ದಾವಾ ಸ್ವತ್ತಿನ ಕಬ್ಜೆಯಲ್ಲಿ ಇರುತ್ತೇವೆ ಎಂದರೆ ಸರಿಯಲ್ಲ. ವಾದಿ ನನಗೆ ದಾವಾ ಸ್ವತ್ತಿನಲ್ಲಿ ಹಿಸ್ಸೆ ಬೇಡಿದಾಗ ನಾನು ನಿರಾಕರಿಸಿ ಕಾನೂನುಬಾಹಿರವಾಗಿ ಅಲ್ಲಿ ಮನೆ ಕಟ್ಟಲು ಪ್ರಾರಂಭಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನಲ್ಲಿ ಕಟ್ಟಡ ಕೆಲಸ ಮಾಡಬಾರದು ಎಂದು ನ್ಯಾಯಾಲಯದಿಂದ ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ಮನೆ ಕಟ್ಟುವ ಕೆಲಸ ಮುಗಿದ ನಂತರ ಸದರಿ ಆದೇಶ ಆಗಿರುತ್ತದೆ ಎಂದು ನುಡಿಯುತ್ತಾರೆ. ಈಗ ನಾನು ನಿಪಿ-3 ರಿಂದ 5 ಛಾಯಾ

ಚಿತ್ರಗಳನ್ನು ನೋಡುತ್ತಿದ್ದು, ಅವುಗಳಲ್ಲಿ ಕಾಣುತ್ತಿರುವ ಸ್ವತ್ತು ದಾವಾ ಸ್ವತ್ತು ಆಗಿರುವುದಿಲ್ಲ. ಮಧ್ಯಂತರ ಅರ್ಜಿ 1 ರ ವಿಚಾರಣೆಯ ವೇಳೆಯಲ್ಲಿ ಸದರಿ ಛಾಯಾ ಚಿತ್ರಗಳು ದಾವಾ ಸ್ವತ್ತಿಗೆ ಸಂಬಂಧಿಸಿರುವ ಛಾಯಾ ಚಿತ್ರಗಳು ಅಲ್ಲ ಎಂದು ನಾನು ಎಲ್ಲಿಯೂ ಹೇಳಿರುವುದಿಲ್ಲ. ನಾನು ಈಗ ನಿಡಿ-19 ರ ಛಾಯಾ ಚಿತ್ರ ನೋಡುತ್ತಿದ್ದು, ಅದನ್ನು ಸುಮಾರು 5 ವರ್ಷಗಳ ಹಿಂದೆ ತೆಗೆಯಲಾಗಿದೆ. ನಿಡಿ-19 ರ ಛಾಯಾ ಚಿತ್ರದ ಕುರಿತು ನಾನು ಒಂದು ರಶೀದಿಯನ್ನು ಹಾಜರುಪಡಿಸಿದ್ದು, ಸದರಿ ನಿಡಿ-22 ರಶೀದಿಯಲ್ಲಿ ಎಲ್ಲಿಯೂ ಸಹ ಛಾಯಾ ಚಿತ್ರವನ್ನು 5 ವರ್ಷಗಳ ಹಿಂದೆ ತೆಗೆಯಲಾಗಿದೆ ಎಂದು ನಮೂದು ಮಾಡಲಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ನ್ಯಾಯಾಲಯದಿಂದ ನಿರ್ಬಂದಕಾಜ್ಞೆ ಆದೇಶ ಹೊರಡಿಸಿದ ನಂತರ ನಾನು ಕಾನೂನುಬಾಹಿರವಾಗಿ ದಾವಾ ಸ್ವತ್ತಿನಲ್ಲಿ ಮನೆ ಕಟ್ಟಿರುವ ಕಾರಣ ನಿಡಿ-22 ರಲ್ಲಿ ಯಾವುದೇ ದಿನಾಂಕ ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮಧ್ಯಂತರ ಅರ್ಜಿ 1 ರ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯಲ್ಲಿ ಮನೆಯ ಕಟ್ಟಡ ಕೆಲಸ ನಡೆಯುತ್ತಿದೆ ಹಾಗೂ ಇನ್ನೂ ಕೆಲಸ ಚಾಲ್ತಿಯಲ್ಲಿದೆ ಎಂದು ಅದರ ಪೋಟೋ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ಸಲ್ಲಿಸಿದ ಮೇಲ್ಮನವಿಯು ತಿರಸ್ಕೃತಗೊಂಡು ನನ್ನ ವಿರುದ್ಧ ಆಗಿರುತ್ತದೆ ಎಂದರೆ ಸರಿ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ ಸರಿಯಿದೆ.

Sd/-

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,

ಬೆಳಗಾವಿ.